<u>ಕರ್ನಾಟಕ ಸರ್ಕಾರ</u>

ಸುತ್ತೋಲೆ ಪತ್ರದ ನಂ: ಆರ್‌ಡಿ 3 ಎಲ್‌ಆರ್‌ಎಂ 87 ದಿನಾಂಕ: 18-3-87 ರಂದು ಉಪ ಕಾರ್ಯದರ್ಶಿ, ಕಂದಾಯ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಂದ ಎಲ್ಲಾ ಜಿಲ್ಲಾಧಿಕಾರಿಗಳಿಗೆ : ವಿಶೇಷ ಜಿಲ್ಲಾಧಿಕಾರಿಗಳಿಗೆ ಬರೆದ ಸುತ್ತೋಲೆಯ ನಕಲು.

<u>ಸುತ್ತೋಲೆ</u>

ವಿಷಯ:- ಭೂ ನ್ಯಾಯ ಮಂಡಳಿಗಳಲ್ಲಿ ಭೂ ಮಾಲೀಕರೊಂದಿಗೆ ಗೇಣಿದಾರರೊಂದಿಗೆ ಮತ್ತು ವೀಕ್ಷಕರೊಂದಿಗೆ, ಅಧ್ಯಕ್ಷರು: ಸದಸ್ಯರು ಸರ್ಕಾರಿ ನೌಕರರು ಸವಿನಯ ಮತ್ತು ಗೌರವನೀಯವಾಗಿ ನಡೆದುಕೊಳ್ಳುವ ಬಗ್ಗೆ.

ಉಲ್ಲೇಖ:- ಮುಖ್ಯ ಮಂತ್ರಿಯವರ ಟಿಪ್ಪಣಿ ಸಂಖ್ಯೆ: ಮುಮಂ: 125: ಡಿಇಡಿ (1) 87, ದಿನಾಂಕ: 20-1-1987.

---

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು ಭೂ ನ್ಯಾಯ ಮಂಡಳಿಗಳ ಅಧ್ಯಕ್ಷರು ಸದಸ್ಯರು ಮತ್ತಿತರ ನೌಕರರು ತಮ್ಮ ಮುಂದೆ ಬರುವ ಭೂ ಮಾಲೀಕರು, ಗೇಣಿದಾರರು ಮತ್ತು ವೀಕ್ಷಕರೊಂದಿಗೆ ಅಗೌರವಯುತವಾಗಿ ವರ್ತಿಸುತ್ತಿರುವರೆಂದು ರಾಜ್ಯಾದ್ಯಂತ ಸರ್ಕಾರಕ್ಕೆ ದೂರುಗಳು ಬರುತ್ತಿರುವುದನ್ನು ನಿಮ್ಮ ಗಮನಕ್ಕೆ ಈ ಮೂಲಕ ತರಲಾಗಿದೆ. ಇದು ಯಾವುದೇ ನ್ಯಾಯಾಲಯ, ನ್ಯಾಯಾಧೀಕರಣ ಅಥವಾ ಭೂ ನ್ಯಾಯ ಮಂಡಳಿಯ ನಡವಳಿಕೆಗೆ ಅಪಚಾರ ತರುವಂತಹದಾಗಿದೆ. ನ್ಯಾಯ ಮಂಡಳಿಯ ಮುಂದೆ ಬರುವ ಪ್ರಜೆಗಳಿಗೆ ಆಸನ ಒದಗಿಸಿ ಕುಳ್ಳಿರಿಸಿ ವಿನಯದಿಂದ ಗೌರವಯುತವಾಗಿ ನಡೆದುಕೊಳ್ಳಬೇಕಾದುದು ನ್ಯಾಯ ಮಂಡಲದ ಮುಖ್ಯ ಕರ್ತವ್ಯ. ಈ ಸಭ್ಯ ನಡವಳಿಕೆಗೆ ಯಾವುದೇ ರೀತಿಯ ಯಾರಿಂದಲಾಗಲೀ ಅಡಚಣೆ ಉಂಟಾದಲ್ಲಿ ಅಂತಹವರ ಬಗ್ಗೆ ಸರ್ಕಾರವು ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕಾಗುವುದು. ಇಂತಹ ಪರಿಸ್ಥಿತಿಗೆ ಆಸ್ಪದ ಕೊಡದೆ ಪ್ರಜಾಸೇವಕರಾದ, ಎಲ್ಲಾ ಭೂ ನ್ಯಾಯ ಮಂಡಳಿಗಳ : ಮೇಲ್ಮನವಿ ಪ್ರಾಧಿಕಾರಗಳ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು, ನೌಕರರು ತಮ್ಮಲ್ಲಿ ಬರುವ ಪ್ರಜೆಗಳನ್ನು ಗೌರವದಿಂದ ಕಂಡು, ನ್ಯಾಯ ಮಂಡಳಿಯ : ಮೇಲ್ಮನವಿ ಪ್ರಾಧಿಕಾರದ ಮುಂದೆ ಬರುವ ಕಕ್ಷಿದಾರರಿಗೆ ಮತ್ತು ವೀಕ್ಷಕರಿಗೆ ಕುಳಿತುಕೊಳ್ಳುವ ಏರ್ಪಾಡು ಮಾಡಿ ಅವರೊಂದಿಗೆ ವಿನಯದಿಂದ ನಡೆದುಕೊಳ್ಳಲು ಈ ಮೂಲಕ ಸರ್ಕಾರವು ಆದೇಶಿಸಿದೆ. ತಪ್ಪಿದಲ್ಲಿ ಅಂತಹವರ ಬಗ್ಗೆ ಸರ್ಕಾರವು ಶಿಸ್ತಿನ ಕ್ರಮ ಜರುಗಿಸುವುದು.

---

ನಂ: ಭೂ ಸುಧಾ: 157:86-87 ಹಾಸನ: ದಿನಾಂಕ: 28-3-1987.

ನಕಲನ್ನು ಜಿಲ್ಲಾ ಭೂ ಸುಧಾರಣಾ ಮೇಲ್ಮನವಿ ಪ್ರಾಧಿಕಾರ, ಹಾಸನ ಜಿಲ್ಲೆ, ಹಾಸನರವರಿಗೆ ಸೂಕ್ತ ಕ್ರಮ ಕ್ಕಾಗಿ ರವಾನಿಸಿರುತ್ತೆ.

ನಕಲನ್ನು ಜಿಲ್ಲೆಯ ಎಲ್ಲಾ ವಿಶೇಷ ತಹಶೀಲ್ದಾರರವರಿಗೆ ರವಾನಿಸುತ್ತಾ, ಲಗತ್ತಿಸಿರುವ, ಸದರಿ ಸುತ್ತೋಲೆಯ ನಕಲುಗಳನ್ನು (ಲಗತ್ತಿಸಿದೆ ) ಭೂ ನ್ಯಾಯ ಮಂಡಳಿಯ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಒಪ್ಪಿಸಲು ಸೂಚಿಸಿದೆ.

ವಿಶೇಷ ಜಿಲ್ಲಾಧಿಕಾರಿಗಳವರ ಪರವಾಗಿ,
ಹಾಸನ ಜಿಲ್ಲೆ, ಹಾಸನ.

<u>ಹಸುನಾ: 28ಮಾ:</u>